# ಮೂಗು ಸಣ್ಣದು ಮೂಗುತಿ ದೊಡ್ಡದು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** The lyrics in both the references are fully matching and the singer has followed these wordings.

ರಾಗ: ಆನಂದಭೈರವಿ ತಾಳ: ಅಟ

ಮೂಗು ಸಣ್ಣದು ಮೂಗುತಿ ದೊಡ್ಡದು,
ಭಾರ ಯಾರೊಬ್ಬರಬೇಕು
ಇಂಥಾ ಆಡಿದ ಮಾತುಗಳಾಡಿದವಳ
ಮೋರೆ ಹೇಗೆ ನೋಡಬೇಕು ॥ ೧ ॥

ಮೀರಿ ಹೋದ ಮಾತಿಗೆ
ಎಳ್ಳು ನೀರೇ ಬಿಡಬೇಕು
ಕೂಡಿದ್ದ ಗೆಳೆಯರು ಆಡಿ
ಕೊಂಡ ಮೇಲೆ ಕೇರಿಯೇ ಬಿಡ ಬೇಕು ॥ ೨ ॥

ವಾರಿಗೆ ಒಗತನ ಮೀರಿ ಹೋದವಳ
ಕೈ ಯಾರು ಪಿಡಿಯಬೇಕು
ಸ್ವಾಮಿ ಶ್ರೀ ಪುರಂದರ ವಿಠಲ ರಾಯ
ನೀನೇ ಪಿಡಿಯಬೇಕು ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮೂಗು ಸಣ್ಣದು** – ಅಣುಪ್ರಮಾಣದ ಜೀವ.

**ಮೂಗುತಿ ದೊಡ್ಡದು** – ಜೀವವು ಒದಗಿಸಿಕೊಳ್ಳುವ ಕರ್ಮಸಂಬಂಧ ಹೊರೆಯಾದುದು.

**ಇಂಥಾ…** – ಮಾಯಾದೇವಿ; ಅವಳ ಸ್ವರೂಪವಾಗಲಿ, ವ್ಯಾಪಾರವಾಗಲಿ ಅಚಿಂತ್ಯವಾದುದು.

**ಮೀರಿ ಹೋದ ಮಾತಿಗೆ** – ಪ್ರಾಚೀನ ಕರ್ಮಕ್ಕೆ.

**ನೀರೇ ಬಿಡಬೇಕು** – ತಿಲಾಂಜಲಿ ಕೊಟ್ಟು ಕಳೆದುಕೊಳ್ಳಬೇಕು;

**ಹರಿಸ್ಮರಣೆಯಿಂದ ಕೂಡಿದ್ದ ಗೆಳೆಯರು** – ಪುಣ್ಯ ಪಾಪಗಳು.

**ಕೇರಿ** – ಸಂಸಾರ.

**ವಾರಿಗೆ ಒಗತನ…** – ಪ್ರಾಕೃತ ಕರ್ಮ ಸಂಬಂಧವನ್ನು ಕಳೆದುಕೊಂಡ ಜೀವ.

**Classification:** Mundige
**Ankita:** sri purandara vittala
**Location:** NA
**Category:** Jeevana Darshana, Samsara Chitranagalu
**Sub-Category:** Niru, ADu, kai,
**Pravachana:** NA
**Explanation:** NA